1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ. 152/2022

ದಿನಾಂಕ ಃ 01.08.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಜಿ.ಎಂ. ವಕೀಲರಿಂದ ಃ**

1) ನಿಪಿ.6 ಮತ್ತು 7 ಫೋಟೋದಲ್ಲಿ ಇರುವ ರಸ್ತೆಯಲ್ಲಿ, ಸುಮಾರು ಜನರು ಓಡಾಡುತ್ತಾರೆ ಎಂದರೆ ಸರಿ. ನಿಪಿ. 8 ಮತ್ತು 9 ಫೋಟೋದಲ್ಲಿ, ಕಾಣಿಸುತ್ತಿರುವ ಜಾಗದ ಸುತ್ತ ಮುತ್ತ ಕೃಷಿ ಜಮೀನುಗಳು ಇದೆ ಎಂದರೆ ಸರಿ. ಹಾಗೂ ರೈತರು ಬೆಳಗ್ಗೆಯಿಂದ ಸಂಜೆವರೆಗೂ ಜಮೀನಿಗೆ ಓಡಾಡುತ್ತಿರುತ್ತಾರೆ ಎಂದರೆ ಸರಿ. ಫೋಟೋದಲ್ಲಿ ಕೈ ತೋರಿಸುತ್ತಿರುವ ವ್ಯಕ್ತಿಯು, ನನ್ನೊಂದಿಗೆ ಏನು ಮಾತನಾಡಲಿಲ್ಲ. ಫೋಟೋದಲ್ಲಿ ಕೈ ತೋರಿಸುತ್ತಿರುವ ವ್ಯಕ್ತಿಯು, ಪೊಲೀಸರಿಗೆ ಏನು ಹೇಳಿದರು ಅಂತ ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಇರುವ ನಡವಳಿಕೆಯನ್ನು ಪೊಲೀಸ್ ಇನ್ಸ್ ಪೆಕ್ಟರ್ ಹೇಳಿ ಬರೆಸಿದ್ದರು. ನಾನಾಗಲೀ ಅಥವಾ ಫೋಟೋದಲ್ಲಿ ಇರುವ ವ್ಯಕ್ತಿಗಳಾಗಲೀ , ಹೇಳಿ ಮಹಜರ್ ನಲ್ಲಿ ಬರೆಸಲಿಲ್ಲ. ಮಹಜರ್ ನಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಅಂತ ನನಗೆ ಗೊತ್ತಿಲ್ಲ, ನಾನು ಓದಲಿಲ್ಲ , ನನಗೆ ಓದಲು ಬರುವುದಿಲ್ಲ. ಮಹಜರ್ ಗೆ ಯಾವ ಕಾರಣಕ್ಕೆ ನನ್ನ ಸಹಿಯನ್ನು ಮಾಡಿಸಿಕೊಂಡರು ಅಂತ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ